ಎರಡನೇ ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಪಾಂಡವಪುರ

ಸಿ.ಸಿ.ಸಂಃ **109/2021**

ಕರ್ನಾಟಕ ರಾಜ್ಯದ ಪರವಾಗಿ
ಪೋಲಿಸ್ ಉಪ-ನಿರೀಕ್ಷಕರು
ಪಾಂಡವಪುರ ಪೊಲೀಸ್ ಠಾಣೆ - ಫಿರ್ಯಾದಿದಾರರು

- ವಿರುದ್ಧ -

ಅರುಣ ಮತ್ತು ಇನ್ನೊಬರು ಆರೋಪಿತರು

ಆಪಾದನೆ

ಶ್ರೀಮತಿ ಪದ್ಮ ಎಂ, ಬಿ.ಎ.ಎಲ್., ಎಲ್.ಎಲ್.ಬಿ. ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಪಾಂಡವಪುರ ಆದ ನಾನು,

ಆರೋಪಿಯಾದಃ-

(1) ಅರುಣ ಅಲಿಯಾಸ್ ಪಚ್ಚ ಬಿನ್
ಶಿವಲಿಂಗೇಗೌಡ, 30 ವರ್ಷ,

(2) ಅಭಿಷೇಕ ಅಲಿಯಾಸ್ ಶಿವಣ್ಣ, 24 ವರ್ಷ,
(ಮೃತರಾಗಿರುತ್ತಾರೆ)

ಇಬ್ಬರು ವಾಸಃ ಲಕ್ಷ್ಮೀಸಾಗರ ಗ್ರಾಮ,
ಮೇಲುಕೋಟೆ ಹೋಬಳಿ, ಪಾಂಡವಪುರ
ತಾಲ್ಲೂಕು,

ನಿಮ್ಮ ಮೇಲೆ ಹೊರಿಸುವ ಆರೋಪಣೆ ಏನೆಂದರೆಃ-

ಮೊದಲನೆಯದಾಗಿಃ ದಿನಾಂಕ 15.07.2020 ರಂದು ರಾತ್ರಿ 8.30 ಗಂಟೆ ಸಮಯದಲ್ಲಿ ಪಾಂಡವಪುರ ಪೋಲಿಸ್ ಠಾಣಾ ಸರಹದ್ದಿನ ಪಾಂಡವಪುರ ಟೌನಿನ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯ ತುರ್ತುಚಿಕಿತ್ಸೆ ವಾರ್ಡಿನ ಮುಂಭಾಗ ಆರೋಪಿಯಾದ ನೀನು ಮೇಲುಕೋಟೆ ಪೋಲಿಸ್ ಠಾಣೆಯ ಸರಹದ್ದಿನ ಲಕ್ಷ್ಮೀಸಾಗರ ಗ್ರಾಮದಲ್ಲಿ ಸಂಕ್ರಾಂತಿ ಬಾರ್ ಮತ್ತು ರೆಸ್ಟೋರೆಂಟ್ನ ಮಾಲೀಕರಾದ ಚಾಸಾ-1 ರವರ ರೆಸ್ಟೋರೆಂಟ್ನಲ್ಲಿ ಆರೋಪಿಯಾದ ನೀನು ಮತ್ತು ಮೃತ ಆರೋಪಿಯಾದ ಅಭಿಷೇಕರವರೊಂದಿಗೆ ಬಾರಲ್ಲಿ ಗಲಾಟೆ ಮಾಡಿ ಬಾರಿನಲ್ಲಿ ಕೆಲಸ ಮಾಡುವ ಚಾಸಾ-4 ಮತ್ತು 5 ರವರುಗಳಿಗೆ ಹಲ್ಲೆ, ಮಾಡಿದ್ದು, ಚಾಸಾ-4 ಮತ್ತು 5 ರವರುಗಳನ್ನು ಚಾಸಾ-1 ರವರು ಆಸ್ಪತ್ರೆಗೆ ಚಿಕಿತ್ಸೆಗೆ ಕರೆತಂದಾಗ ಚಾಸಾ-1 ರವರಿಗೆ ಏನೋ ಬೋಳಿ ಮಗನೇ, ಸೂಳೆ ಮಗನೇ ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತೀರಿ ಎಂದು ಆ ಕಾರಣ ಭಾರತೀಯ ದಂಡ ಸಂಹಿತೆ ಕಲಂ 504 ಸಹವಾಚಕ 34 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞೆ ಮತ್ತು ಪರಿಮಿತಿಯೊಳಗೆ ಎಸಗಿರುತ್ತೀರಿ.

ಎರಡನೇಯದಾಗಿಃ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಈ ಮೇಲ್ಕಂಡ ಕಾರಣಕ್ಕಾಗಿ, ಆರೋಪಿಯಾದ ನೀನು ಮತ್ತು ಮೃತ ಅಭಿಷೇಕರವರೊಂದಿಗೆ ಸೇರಿಕೋಂಡು ಸಮಾನ ಉದ್ದೇಶದಿಂದ ಸಾಕ್ಷಿ-1 ರವರು ಚಾಸಾ-4 ಮತ್ತು 5 ರವರುಗಳನ್ನು ಆಸ್ಪತ್ರೆಗೆ

ಕರೆತಂದಾಗ ನೀನು ನಮ್ಮ ಗ್ರಾಮದಲ್ಲಿ ಬಾರ್ ಮತ್ತು ರೆಸ್ಟೊರೆಂಟನ್ನು ಮುಂದೆ ಹೇಗೆ ನಡೆಸುತ್ತೀಯಾ ಎಂದು ಅಡ್ಡಗಟ್ಟಿ ಮುಂದೆ ಹೋಗದಂತೆ ತಡೆದು ನಿಲ್ಲಿಸಿರುವ ಕಾರಣ ಭಾರತೀಯ ದಂಡ ಸಂಹಿತೆ ಕಲಂ 341 ಸಹವಾಚಕ 34 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞೆ ಮತ್ತು ಪರಿಮಿತಿಯೊಳಗೆ ಎಸಗಿರುತ್ತೀರಿ.

<u>ಮೂರನೇಯದಾಗಿಃ</u> ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಈ ಮೇಲ್ಕಂಡ ಕಾರಣಕ್ಕಾಗಿ, ಆರೋಪಿಯಾದ ನೀನು ಮತ್ತು ಮೃತ ಅಭಿಷೇಕರವರೊಂದಿಗೆ ಸೇರಿಕೋಂಡು ಸಮಾನ ಉದ್ದೇಶದಿಂದ ಸಾಕ್ಷಿ-1 ರವರನ್ನು ಉದ್ದೇಶಿಸಿ, ಮನಗೇ ನೀನು ಒಬ್ಬನೇ ಸಿಗು ನಿನ್ನನ್ನು ಕೊಚ್ಚಿ ಕೊಲೆ ಮಾಡಿ ಊತುಹಾಕಿ ನಿನ್ನ ಬಾರ್ ರೆಸ್ಟೊರೆಂಟನ್ನು ಶಾಶ್ವತವಾಗಿ ಮುಚ್ಚಿಸುತ್ತೇವೆಂದು ಕೊಲೆ ಬೆದರಿಕೆ ಹಾಕಿರುತ್ತೀರಿ ಎಂದು ಆ ಕಾರಣ ಭಾರತೀಯ ದಂಡ ಸಂಹಿತೆ ಕಲಂ 506 ಸಹವಾಚಕ 34 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞೆ ಮತ್ತು ಪರಿಮಿತಿಯೊಳಗೆ ಎಸಗಿರುತ್ತೀರಿ.

ಪ್ರ.ನಂ.1ಃ ನೀವು ಈ ಮೇಲಿನ ಆರೊಪವನ್ನು ಓದಿ ಹೇಳಿದ್ದು ಅರ್ಥ ಮಾಡಿಕೊಂಡಿರುವಿರಾ?
ಉತ್ತರಃ ಆ-1

ಪ್ರ.ನಂ.2ಃ ನೀವು ಈ ಆರೊಪವನು ಒಪ್ಪಿಕೊಳ್ಳುವಿರಾ ಅಥವಾ ವಾದಿಸುವಿರಾ?
ಉತ್ತರಃ ಆ-1

ಆರೋಪಿತರನ್ನು ತೆರೆದ ನ್ಯಾಯಾಲಯದಲ್ಲಿ ವಿಚಾರಿಸಿದ ಬಳಿಕ ಅವರ ಹೇಳಿಕೆಯನ್ನು ಪಡೆದಿದ್ದು ಅದು ಅವರ ಸತ್ಯ ಹಾಗೂ ಸಂಪೂರ್ಣವಾದ ಹೇಳಿಕೆಯಾಗಿರುತ್ತದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ.

2 ನೇ ಅಪರ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ
ಪಾಂಡವಪುರ

ದಿನಾಂಕಃ 21.07.2023
ಸ್ಥಳಃ ಪಾಂಡವಪುರ